ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: https://kptcl.karnataka.gov.in.
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521
ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009

ಸಂಖ್ಯೆ: ಕವಿಪ್ರನಿನಿ/ಬಿ99/ಬಿ5ಬಿ/11333/2009-10 ದಿನಾಂಕ: 5 JAN 2021

## ಸುತ್ತೋಲೆ

ವಿಷಯ: 2020-21 ನೇ ಸಾಲಿನ ಸ್ಥಿರಾಸ್ತಿ ಮತ್ತು ಚರಾಸ್ತಿ ಹಾಗೂ ಹೊಣೆಗಳ ವಿವರಗಳನ್ನು ಘೋಷಿಸುವ ಬಗ್ಗೆ.

ಉಲ್ಲೇಖ:
1. ನಿಗಮದ ಆದೇಶ ಸಂಖ್ಯೆ: ಕೆಇಬಿ/ಬಿ4/7626/85-86 ದಿನಾಂಕ: 07-08-1987.
2. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ34/ಎಸ್ಎ4/7626/85-86 ದಿನಾಂಕ: 03.02.2009.
3. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ85/ಬಿ5ಎ/427/2007-08 ದಿನಾಂಕ: 04.01.2020.
4. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ5ಬಿ/11333/2009-10 ದಿನಾಂಕ: 09.06.2020.
5. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ99/ಬಿ5ಬಿ/11333/2009-10 ದಿನಾಂಕ: 19.12.2020.

---

ಕವಿಮಂ ನೌಕರರ ಸೇವಾ(ನಡತೆ) ನಿಬಂಧನೆಗಳು 1988 ರ ನಿಬಂಧನೆ 23 ರ ಅನ್ವಯ, ಅಧಿಕಾರಿಗಳು ಮತ್ತು ನೌಕರರು ನಿಗಮದ ಸೇವೆಗೆ ನೇಮಕಗೊಂಡ ಆರಂಭದಲ್ಲಿರುವಂತೆ, ನಿಗಮವು ನಿಗಧಿಪಡಿಸುವ ನಮೂನೆಯಲ್ಲಿ ಪೂರ್ಣ ವಿವರಗಳ ಸಹಿತ ತಮ್ಮ ಆಸ್ತಿ ಮತ್ತು ಹೊಣೆಗಳ ವಿವರಗಳ ಪಟ್ಟಿಯನ್ನು ಸಲ್ಲಿಸಬೇಕಿರುತ್ತದೆ. ಮುಂದುವರೆದಂತೆ, ಅಧಿಕಾರಿಗಳು ಮತ್ತು ನೌಕರರು ತಮ್ಮ ಆಸ್ತಿ ಮತ್ತು ಹೊಣೆಗಳ ವಿವರಗಳ ಪಟ್ಟಿಯನ್ನು ಪ್ರತೀ ವರ್ಷವೂ ಕ್ಯಾಲೆಂಡರ್ ವರ್ಷಾಂತ್ಯಕ್ಕೆ ಸಲ್ಲಿಸುತ್ತಿರುವುದರ ಬದಲಾಗಿ ಆರ್ಥಿಕ ವರ್ಷದ ಅಂತ್ಯಕ್ಕೆ ಅಂದರೆ ದಿನಾಂಕ: 31.03.2021 ರ ಅಂತ್ಯಕ್ಕೆ ಇರುವಂತೆ ನಿಗದಿತ ನಮೂನೆಯಲ್ಲಿ ಸಲ್ಲಿಸುವುದು. ನಿಗದಿತ ದಿನಾಂಕದೊಳಗೆ ಸಲ್ಲಿಸದಿದ್ದಲ್ಲಿ, ಕರ್ತವ್ಯ ಲೋಪವೆಂದು ಪರಿಗಣಿಸುವುದು ಅನಿವಾರ್ಯವಾಗಿರುತ್ತದೆ. ಆದ್ದರಿಂದ, ರಾಜ್ಯಾವಾರು ಪದವೃಂದದ ಅಧಿಕಾರಿಗಳು ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಹಾಗೂ ಇತರೆ ಸಿಬ್ಬಂದಿಯು ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳಿಗೆ ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ತಪ್ಪದೇ ಸಲ್ಲಿಸತಕ್ಕದ್ದು. ಈ ವಿಷಯದಲ್ಲಿ ಕೆಳಕಂಡ ನಿರ್ದೇಶನವನ್ನು ನೀಡಲಾಗಿದೆ:

1. ಪ್ರತೀ ವರ್ಷದಂತೆ ಎಲ್ಲಾ ಅಧಿಕಾರಿಗಳು ಮತ್ತು ನೌಕರರು ಈ ಆರ್ಥಿಕ ವರ್ಷಾಂತ್ಯಕ್ಕೆ, **ದಿನಾಂಕ: 31.03.2021 ರಂದು ಇರುವಂತೆ** ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಮೇಲೆ ತಿಳಿಸಿದಂತೆ ಸಂಬಂಧಿಸಿದ ಕಛೇರಿಗಳಿಗೆ ಆಸ್ತಿ ಮತ್ತು ಹೊಣೆಗಳ ಪಟ್ಟಿಯನ್ನು ಲಗತ್ತಿಸಿದ ನಮೂನೆಗಳಲ್ಲಿ ಭರ್ತಿಮಾಡಿ ಸಲ್ಲಿಸತಕ್ಕದ್ದು.

...2

2. ರಾಜ್ಯಾವಾರು ಪದವೃಂದದ ಅಧಿಕಾರಿಗಳು ವಿವರಗಳನ್ನು ಹಾಗೂ <u>ತಮ್ಮ ಪಿ.ಐ.ಎನ್. ಸಂಖ್ಯೆಯನ್ನು</u> ತಪ್ಪದೇ ನಮೂದಿಸಿ ನಿರ್ದೇಶಕರು(ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ ರವರಿಗೆ ನೇರವಾಗಿ ಕಳುಹಿಸತಕ್ಕದ್ದು.

3. ಅಧಿಕಾರಿಗಳು ಮತ್ತು ನೌಕರರು 2020-21 ನೇ ಸಾಲಿನಲ್ಲಿ ಮಾತ್ರ ತಮ್ಮ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯ ಮೇಲೆ ದಿನಾಂಕ: 01.01.2020 ರಿಂದ ದಿನಾಂಕ: 31.03.2021 ಎಂದು ನಮೂದಿಸತಕ್ಕದ್ದು.

4. ಅಧಿಕಾರಿಗಳು ಮತ್ತು ನೌಕರರು **<u>ತಮ್ಮ 2020-21 ರ ಆರ್ಥಿಕ ವರ್ಷದ</u>** ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಂಬಂಧಿಸಿದ ಕಛೇರಿಗಳಿಗೆ ಸಲ್ಲಿಸಲು **ಕೊನೆಯ ದಿನಾಂಕ**: <u>31.05.2021.</u> ವಿವರವನ್ನು ಸಲ್ಲಿಸದ ಅಧಿಕಾರಿಗಳ ಮತ್ತು ನೌಕರರ ವಿರುದ್ಧ <u>ದಿನಾಂಕ: 01.06.2021 ರ ನಂತರ</u> ಸಂಬಂಧಿಸಿದ ನೇಮಕಾತಿ ಪ್ರಾಧಿಕಾರವು ಶಿಸ್ತು ಕ್ರಮವನ್ನು ಜರುಗಿಸತಕ್ಕದ್ದು.

5. 'ಎ' ಮತ್ತು 'ಬಿ' ಗುಂಪಿನ ಎಲ್ಲಾ ಅಧಿಕಾರಿಗಳು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಲ್ಲಿಸಿದ ಬಗ್ಗೆ **<u>ಜೂನ್ 2021 ರ ಮಾಹೆಯ ವೇತನದ ಹುಂಡಿಯಲ್ಲಿ</u>** ದೃಢೀಕರಿಸತಕ್ಕದ್ದು.

6. ಸಂಬಂಧಿಸಿದ ನೇಮಕಾತಿ ಪ್ರಾಧಿಕಾರವು ಈ ವಿವರವನ್ನು ನಿಗದಿತ ನಮೂನೆಯಲ್ಲಿ 'ಸಿ' ಮತ್ತು 'ಡಿ' ಗುಂಪಿನ ನೌಕರರಿಂದ ಪಡೆದು ಅವರ ಕಛೇರಿಯಲ್ಲಿ ವೈಯಕ್ತಿಕ ಕಡತಗಳನ್ನು ನಿರ್ವಹಿಸತಕ್ಕದ್ದು.

7. ಅಧಿಕಾರಿಗಳು ಮತ್ತು ನೌಕರರು ಸಲ್ಲಿಸಿರುವ ಪ್ರಸ್ತುತ ಆರ್ಥಿಕ ವರ್ಷದ ಚರ/ಸ್ಥಿರ ಆಸ್ತಿ ಮತ್ತು ಹೊಣೆಗಳ ಪಟ್ಟಿಯನ್ನು ಹಿಂದಿನ ವರ್ಷದ ಆಸ್ತಿ ಮತ್ತು ಹೊಣೆಗಳ ಪಟ್ಟಿಯೊಂದಿಗೆ ಹೋಲಿಕೆ ಮಾಡಿ. ಹೆಚ್ಚಿನ ವ್ಯತ್ಯಾಸ/ಅಂತರ ಕಂಡುಬಂದಲ್ಲಿ. ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಗಳು ಸಂಬಂಧಿಸಿದ ಅಧಿಕಾರಿಗಳು ಮತ್ತು ನೌಕರರುಗಳಿಗೆ ಪತ್ರದ ಮೂಲಕ ಸ್ಪಷ್ಟೀಕರಣವನ್ನು ಪಡೆದು ಕಡತದಲ್ಲಿ ಸೇರಿಸುವಂತೆ ಸೂಚಿಸಿದೆ.

8. ಕವಿಮಂ ನೌಕರರ ಸೇವಾ(ನಡತೆ) ನಿಬಂಧನೆಗಳು 1988 ರ ನಿಬಂಧನೆ 23 ರಲ್ಲಿ ತಿಳಿಸಿರುವಂತೆ ಅಧಿಕಾರಿಗಳು ಮತ್ತು ನೌಕರರು ತಮ್ಮ ಅಥವಾ ತಮ್ಮ ಕುಟುಂಬ ಸದಸ್ಯರ ಹೆಸರಿನಲ್ಲಿ ಸ್ಥಿರಾಸ್ತಿ ಖರೀದಿ/ಮಾರಾಟ ಮಾಡುವ ಮುನ್ನ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಗಳಿಂದ ಪೂರ್ವಾನುಮತಿಯನ್ನು ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ99/3677/2019-20 ದಿನಾಂಕ:07.06.2019 ರ ಅನ್ವಯ ಕಡ್ಡಾಯವಾಗಿ ಪಡೆದಿರತಕ್ಕದ್ದು.

9. ಅಧಿಕಾರಿಗಳು ಮತ್ತು ನೌಕರರು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಲ್ಲಿಸದೇ ಇದ್ದಲ್ಲಿ. ಸದರಿ ಅಧಿಕಾರಿಗಳು ಮತ್ತು ನೌಕರರಿಗೆ ನಿರಾಕ್ಷೇಪಣಾ ಪತ್ರಗಳನ್ನು ಅಥವಾ ಯಾವುದೇ ವಿಶೇಷ ಅನುಮತಿಯನ್ನು ನೀಡತಕ್ಕದ್ದಲ್ಲ.

ಈ ವಿಷಯಕ್ಕೆ ಸಂಬಂಧಿಸಿದಂತೆ, ಮೇಲಾಧಿಕಾರಿಗಳು ಅವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಯ ಗಮನಕ್ಕೆ ಮೇಲಿನ ಸೂಚನೆಗಳನ್ನು ತಪ್ಪದೇ ತರಲು ಕೋರಿದೆ. ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರಗಳನ್ನು ಸಲ್ಲಿಸಬೇಕಿರುವ <u>ನಮೂನೆಗಳನ್ನು</u> ಕವಿಪ್ರನಿನಿಯ ಜಾಲತಾಣ: <u>https://kptcl.karnataka.gov.in.=>eprasarana</u> ದಲ್ಲಿ ಪಡೆಯಬಹುದಾಗಿದೆ.

...3

**ವಿಶೇಷ ಸೂಚನೆ:** ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ99/ಬಿ5ಬಿ/11333/2009-10 ದಿನಾಂಕ: 19.12.2020 ರ ಸುತ್ತೋಲೆಯನ್ನು ಹಿಂಪಡೆಯಲಾಗಿದೆ.

**"ನಿಗಮದ ನಿರ್ದೇಶಕರುಗಳ ಸಭೆಯ ಅನುಸಮರ್ಥನೆಗೆ ಒಳಪಟ್ಟಿರುತ್ತದೆ"**

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ.)**
**ಕವಿಪ್ರನಿನಿ**

<u>ಪ್ರತಿಗಳು:</u>

1 ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂ.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು) ಮತ್ತು (ಆ. ಮತ್ತು ಮಾ.ಸಂ.) ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು

<u>ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ https://kptcl.karnataka.gov.in.-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.</u>

1. ಎಲ್ಲಾ ಅಧೀಕ್ಷಕ ಇಂಜಿನಿಯರ್ / ಎಲ್ಲಾ ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ಎಸ್ಕಾಂ.
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಎಲ್ಲಾ ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
3 ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ.), ಕವಿಪ್ರನಿನಿ/ಎಸ್ಕಾಂ.
4 ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

<u>ಪ್ರತಿಗಳು ಮಾಹಿತಿಗಾಗಿ:</u>

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ & ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.

---

**ಮೆಮೋಸಂಖ್ಯೆ:ಪ್ರವ್ಯ(ಆ)/ಲೆ(ಸಿ)/ಸಲೆ(ಸಿ)/ಹಿಸ(ಸಿ)-1/ಕಿಸ/ಕ-139/2020-21** ದಿನಾಂಕ:- 05-4431. **18 JAN 2021**

**ಪ್ರತಿ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ**

1. ಮುಖ್ಯ ಇಂಜಿನೀಯರ್(ವಿ)/ನಿಯಂತ್ರಣಾಧಿಕಾರಿಗಳು ಕಾ ಮತ್ತು ಪಾ ವಲಯ, ಹುವಿಸಕಂನಿ., ಹುಬ್ಬಳ್ಳಿ/ಬೆಳಗಾವಿ.
2. ಎಲ್ಲಾ ಅಧೀಕ್ಷಕ ಇಂಜಿನೀಯರ್(ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು ಕಾ ಮತ್ತು ಪಾ ವೃತ್ತ, ಹುವಿಸಕಂನಿ.,
3. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕಂಪನಿ ಕಾರ್ಯಾಲಯದ ಹುವಿಸಕಂನಿ, ಹುಬ್ಬಳ್ಳಿ ರವರ ಮಾಹಿತಿಗಾಗಿ.
4. ಅಧೀಕ್ಷಕ ಇಂಜಿನೀಯರ್(ವಿ),ಟಿ&ಪಿ/ಪಿಎಂಸಿ/ಐಟಿ&ಎಂಟಿ ಕಂಪನಿ ಕಾರ್ಯಾಲಯದ ಹುವಿಸಕಂನಿ, ಹುಬ್ಬಳ್ಳಿ
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾ ಮತ್ತು ಪಾ ವಿಭಾಗ, ಹುವಿಸಕಂನಿ.,
6. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾ ಮತ್ತು ಪಾ ಉಪ-ವಿಭಾಗ, ಹುವಿಸಕಂನಿ.,

ಸದರಿ ಸುತ್ತೋಲೆಯಲ್ಲಿನ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ತಮ್ಮ ಅದೀನದಲ್ಲಿರುವ ಎಲ್ಲಾ ಅಧಿಕಾರಿ/ನೌಕರರಿಗೆ ಸೂಚಿಸುವಂತೆ ಕೋರಿದೆ.ಸದರಿ ಸುತ್ತೋಲೆಯನ್ನು ಕವಿಪ್ರನಿನಿಯ ಜಾಲತಾಣ:https://kptcl.karnataka.gov.in.=>eprasarana ದಲ್ಲಿ ಪಡೆಯಬಹುದಾಗಿದೆ.

ಪ್ರತಿಗಳು: 1.ಆರ್ಥಿಕ ಸಲಹೆಗಾರರು(ಆಂ.ಪ), ಕಂಪನಿ ಕಾರ್ಯಾಲಯದ ಹುವಿಸಕಂನಿ, ಹುಬ್ಬಳ್ಳಿ ರವರ ಮಾಹಿತಿಗಾಗಿ.

2.ಹಿರಿಯ ಆಪ್ತ ಕಾರ್ಯದರ್ಶಿ,ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ತಾಂತ್ರಿಕ), ಕಂಪನಿ ಕಾರ್ಯಾಲಯ,ಹುವಿಸಕಂನಿ, ಹುಬ್ಬಳ್ಳಿ ರವರ ಮಾಹಿತಿಗಾಗಿ,ಹಾಗೂ ಮೇಲ್ಕಂಡ ಅಂಶಗಳನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.

3.ಆಪ್ತ ಕಾರ್ಯದರ್ಶಿ,ನಿರ್ದೇಶಕರು(ಹಣಕಾಸು)/ಮುಖ್ಯ ಅರ್ಥಿಕ ಅಧಿಕಾರಿ, ಕಂಪನಿ ಕಾರ್ಯಾಲಯದ ಹುವಿಸಕಂನಿ, ಹುಬ್ಬಳ್ಳಿ ರವರ ಮಾಹಿತಿಗಾಗಿ,ಹಾಗೂ ಮೇಲ್ಕಂಡ ಅಂಶಗಳನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ hescom.karnataka.gov.in ವೆಬ್ ಸೈಟನಲ್ಲಿ ಪ್ರಕಟಿಸಲಾಗಿದೆ.**

16/1/21

ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಮಾ.ಸಂ.ಅ)
ನಿಗಮ ಕಾರ್ಯಾಲಯ,ಹುವಿಸಕಂನಿ,ಹುಬ್ಬಳ್ಳಿ.

# ಕೋಷ್ಟಕ

1. ಶ್ರೀಮತಿ/ಶ್ರೀ _ _ _ _ _ _ _ _ ರವರ ವೇತನದ ವಿವರಗಳು _ _ _ _ _ _ _ _ ರಿಂದ _ _ _ _ _ _ _ _ ರ ವರೆಗೆ.

| ಕ್ರ. ಸಂ | ತಿಂಗಳು ವರ್ಷ | ಸಂಬಳ ಗಳಿಕೆ | | | | | | | | ಕಡಿತ | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | | ಮೂಲ ವೇತನ | ಡಿ. ಪಿ | ತುಟ್ಟಿ ಭತ್ಯೆ | ಹೆಚ್. ಆರ್. ಎ | ಸಿ. ಸಿ. ಎ | ಪಿ. ಸಿ. ಇ. ಎಂ. ಪಿ. ಎಲ್. ಆರ್. | ಇತರೆ ಭತ್ಯೆ | ಒಟ್ಟು ವೇತನ | ಎಲ್. ಐ. ಸಿ. | ಪಿ. ಎಲ್. ಐ. | ಎಫ್. ಬಿ. ಎಫ್. | ಬಾಡಿಗೆ | ಪಿ. ಟಿ. | ಐ. ಟಿ. | ಕೆ. ಇ. ಬಿ. ಇ. ಯು. | ಎಸ್. ಸಿ. ಎಸ್. ಟಿ. ಎ. | ಪಿ. ಸಿ. | ಪಿ. ಸಿ. ಇ. ಎಂ. ಪಿ. ಎಲ್. ಆರ್. | ಇತರೆ | ಒಟ್ಟು ಕಡಿತ |
| | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
| 1 | ಜನವರಿ-20 | | | | | | | | | | | | | | | | | | | | |
| 2 | ಫೆಬ್ರವರಿ-20 | | | | | | | | | | | | | | | | | | | | |
| 3 | ಮಾರ್ಚ್-20 | | | | | | | | | | | | | | | | | | | | |
| 4 | ಏಪ್ರಿಲ್-20 | | | | | | | | | | | | | | | | | | | | |
| 5 | ಮೇ-20 | | | | | | | | | | | | | | | | | | | | |
| 6 | ಜೂನ್-20 | | | | | | | | | | | | | | | | | | | | |
| 7 | ಜುಲೈ-20 | | | | | | | | | | | | | | | | | | | | |
| 8 | ಆಗಸ್ಟ್-20 | | | | | | | | | | | | | | | | | | | | |
| 9 | ಸೆಪ್ಟೆಂಬರ್-20 | | | | | | | | | | | | | | | | | | | | |
| 10 | ಅಕ್ಟೋಬರ್-20 | | | | | | | | | | | | | | | | | | | | |
| 11 | ನವೆಂಬರ್-20 | | | | | | | | | | | | | | | | | | | | |
| 12 | ಡಿಸೆಂಬರ್-20 | | | | | | | | | | | | | | | | | | | | |
| 13 | ಜನವರಿ-21 | | | | | | | | | | | | | | | | | | | | |
| 14 | ಫೆಬ್ರವರಿ-21 | | | | | | | | | | | | | | | | | | | | |
| 15 | ಮಾರ್ಚ್-21 | | | | | | | | | | | | | | | | | | | | |
| 16 | ರಜೆ ನಗದೀ ಕರಣ | | | | | | | | | | | | | | | | | | | | |
| 17 | ಇತರೆ | | | | | | | | | | | | | | | | | | | | |
| | ಒಟ್ಟು ಮೊತ್ತ | | | | | | | | | | | | | | | | | | | | |

ಸಹಿ :

ಹೆಸರು :

ಪದನಾಮ :

## 2. ಉಳಿತಾಯದ ವಿವರಗಳು

| | | |
|---|---|---|
| ಪ್ರಸಕ್ತ ಆರ್ಥಿಕ ವರ್ಷದಲ್ಲಿನ ಆರಂಭಿಕ ಬಾಕಿ | ರೂ. | |
| (+) ಕೋಷ್ಟಕದಂತೆ ನಿವ್ವಳ ವೇತನ | ರೂ. | |
| (+) ಇತರೆ ಆದಾಯಗಳು(ದಾಖಲಾತಿಗಳೊಂದಿಗೆ)<br>1)<br>2) | ರೂ. | |
| ಒಟ್ಟು ಆದಾಯ(ಎ) | ರೂ. | |
| (–) ಸಂಬಳದ ಕಡಿತಗಳನ್ನು ಹೊರತುಪಡಿಸಿ ಇತರೆ ಹೂಡಿಕೆಗಳು<br>1)<br>2) | ರೂ. | |
| (–) ದಿನ ನಿತ್ಯದ ಗೃಹ ನಿಮಿತ್ತ ಮತ್ತು ಇತರೆ ಖರ್ಚುಗಳು<br>1)<br>2) | ರೂ. | |
| ಒಟ್ಟು ಖರ್ಚು(ಬಿ) | | |
| ಪ್ರಸಕ್ತ ಆರ್ಥಿಕ ವರ್ಷದ ನಿವ್ವಳ ಉಳಿತಾಯ(ಎ–ಬಿ) | ರೂ. | |

ಸಹಿ :

ಹೆಸರು :

ಪದನಾಮ :

# ನಮೂನೆ-1

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

____ರ ಆರ್ಥಿಕ ವರ್ಷಾಂತ್ಯಕ್ಕೆ ಸ್ಥಿರಾಸ್ತಿಗಳ ವಿವರವನ್ನು ಘೋಷಿಸುವ ಪಟ್ಟಿ

(ದಿನಾಂಕ: ರಿಂದ ರವರೆಗೆ)

1) ಅಧಿಕಾರಿ/ನೌಕರನ ಹೆಸರು :

2) ಕಾರ್ಯನಿರ್ವಹಿಸುತ್ತಿರುವ ಹುದ್ದೆ :

3) ವೇತನ ಶ್ರೇಣಿ ಮತ್ತು ಪ್ರಸಕ್ತ ವೇತನ :

| ಕ್ರಮ ಸಂಖ್ಯೆ | ಸ್ಥಿರಾಸ್ತಿಯು ಇರುವ ಸ್ಥಳ, ಜಿಲ್ಲೆಯ ಹೆಸರು, ಉಪ ವಿಭಾಗ, ತಾಲ್ಲೂಕು, ಗ್ರಾಮ | ಭೂಮಿ/ಮನೆ ಮತ್ತು ಇತರ ಕಟ್ಟಡಗಳ ಹೆಸರು ಮತ್ತು ವಿವರಣೆ, ಕೊಟ್ಟ ಕ್ರಯ | ಈಗಿನ ಮೌಲ್ಯ ಮಾಪನ (ಅಂದಾಜು) | ಅಧಿಕಾರಿಯ/ ಸರ್ಕಾರಿ ನೌಕರನ ಹೆಸರಿನಲ್ಲಿರದಿದ್ದರೆ, ಯಾರ ಹೆಸರಿನಲ್ಲಿದೆ ಮತ್ತು ಅಧಿಕಾರಿ/ನೌಕರನ ಸಂಬಂಧ | ಅರ್ಜಿಸಿದ ವಿಧಾನ, ಖರೀದಿಸಿದ/ ಗುತ್ತಿಗೆ, ಅಡಮಾನ, ಪಿತ್ರಾರ್ಜಿತ, ಕಾಣಿಕೆ ಅಥವಾ ಆರ್ಜಿಸಿದ ದಿನಾಂಕ | ಈ ಆಸ್ತಿಯಿಂದ ವಾರ್ಷಿಕ ಆದಾಯ | ಷರಾ |
|---|---|---|---|---|---|---|---|
| (1) | (2) | (3) | (4) | (5) | (6) | (7) | (8) |
| | | | | | | | |

ಸೂಚನೆ: ಪ್ರಸಕ್ತ 2020-21 ನೇ ಸಾಲಿನ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯನ್ನು ದಿನಾಂಕ: 01.01.2020 ರಿಂದ ದಿನಾಂಕ: 31.3.2021 ರವರೆಗೂ ನೀಡತಕ್ಕದ್ದು.

ಸಹಿ :

ಹೆಸರು :

ಪದನಾಮ :

ನಮೂನೆ-2

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

____ರ ಆರ್ಥಿಕ ವರ್ಷಾಂತ್ಯಕ್ಕೆ ಸ್ಥಿರಾಸ್ತಿಗಳ ವಿವರವನ್ನು ಘೋಷಿಸುವ ಪಟ್ಟಿ

(ದಿನಾಂಕ: ರಿಂದ ರವರೆಗೆ)

1) ಅಧಿಕಾರಿ/ನೌಕರನ ಹೆಸರು :

2) ಕಾರ್ಯನಿರ್ವಹಿಸುತ್ತಿರುವ ಹುದ್ದೆ :

3) ವೇತನ ಶ್ರೇಣಿ ಮತ್ತು ಪ್ರಸಕ್ತ ವೇತನ :

| ಕ್ರಮ ಸಂಖ್ಯೆ | ಚರಾಸ್ತಿಗಳ ವಿವರ. ಬ್ಯಾಂಕು/ಅಂಚೆ ಕಛೇರಿಯಲ್ಲಿನ ಖಾತೆಗಳು/ಸ್ಟಾಕ್/ಷೇರು ಮತ್ತು ಡಿಬೆಂಚರುಗಳು | ಚರಾಸ್ತಿಯ ಬೆಲೆ | ಖರೀದಿಸಿದ/ ವಿಲೆ ಮಾಡಿದ ದಿನಾಂಕ | ಕಲಂ-2ರಲ್ಲಿ ಉಲ್ಲೇಖಿಸಿದ ಚರಾಸ್ತಿಯನ್ನು ಖರೀದಿಸಲು ಇದ್ದ ಆದಾಯದ ಮೂಲಗಳು | ಅರ್ಜಿಸಿದ ಚರಾಸ್ತಿಯನ್ನು ನಿಗಮಕ್ಕೆ ವರದಿ ಮಾಡಿದ ದಿನಾಂಕ | ಷರಾ |
|---|---|---|---|---|---|---|
| (1) | (2) | (3) | (4) | (5) | (6) | (7) |
| 1. | | | | | | |
| 2. | | | | | | |

ಸೂಚನೆ: ಪ್ರಸಕ್ತ 2020-21 ನೇ ಸಾಲಿನ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿಯನ್ನು ದಿನಾಂಕ: 01.01.2020 ರಿಂದ ದಿನಾಂಕ: 31.3.2021 ರವರೆಗೂ ನೀಡತಕ್ಕದ್ದು.

ಸಹಿ :

ಹೆಸರು :

ಪದನಾಮ :